ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಗುರುವಾರ ೧೭ನೇ ಮಾರ್ಚ್ ೧೯೮೩/ಫಾಲ್ಗುಣ ೨೬, ೧೯೦೪

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಘಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ವೀರಣ್ಣ) ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ (ಬಾಯಿ ಮಾತಿನ ಉತ್ತರಗಳು)

ಶ್ರೀ ವೀರಣ್ಣ (ಉಪಾಧ್ಯಕ್ಷರು).—ಬಾಯಿ ಮಾತಿನ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ–೭ ಪ್ರಶ್ನೆ ನಂ. ೫೮ ಶ್ರೀ ಎಂ. ಎಸ್. ಕೃಷ್ಣನ್, ಮಾನ್ಯ ಸದಸ್ಯರು ಬಂದಿಲ್ಲ.

ರಾಜ್ಯದಲ್ಲಿನ ಕೈಗಾರಿಕಾ ವಿವಾದಗಳು

೫೮. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ)—ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ.—

(ಅ) ೧೯೮೧, ೧೯೮೨, ೧೯೮೩ನೇ ಸಾಲುಗಳಲ್ಲಿ ಕೈಗಾರಿಕಾ ವಿವಾದಗಳ ಸಂಖ್ಯೆ ಎಷ್ಟು ಇಲ್ಲಿಯವರೆಗಿನ ವಿವರಗಳನ್ನು ಕೊಡಿರಿ ;

(ಆ) ಈ ಕೈಗಾರಿಕಾ ವಿವಾದಗಳಲ್ಲಿ ಪಂಚಾಯತಿ ನ್ಯಾಯಾಲಯಕ್ಕಾಗಲಿ ಕಾರ್ಮಿಕ ನ್ಯಾಯಾಲಯಕ್ಕಾಗಲಿ ಒಪ್ಪಿಸದಿರುವ (ಅಂದರೆ ನಿರಾಕರಿಸಲ್ಪಟ್ಟ) ವಿವಾದಗಳೆಷ್ಟು ;

(ಇ) ಪಂಚಾಯತಿ ನ್ಯಾಯಾಲಯಕ್ಕೆ ಒಪ್ಪಿಸಬೇಕೆ ಬೇಡವೆ ಎಂದು ನಿರ್ಧಾರ ಮಾಡದಿರುವ ಕೈಗಾರಿಕಾ ವಿವಾದಗಳ ಸಂಖ್ಯೆ ಎಷ್ಟು ?

ರಾಜ್ಯದಲ್ಲಿ ಒಪ್ಪಂದದ ಮೇಲೆ ಓಡಾಡುವ ಬಸ್ಸುಗಳ ಬಗ್ಗೆ

೫೯. ಶ್ರೀ ಬಿ. ಭೈರಪ್ಪಾಜಿ (ತುರುವೆಕೆರೆ)—ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯದಲ್ಲಿ ಒಪ್ಪಂದದ ಆಧಾರದ ಮೇಲೆ ಓಡುವ ಬಸ್ಸುಗಳಿಗೆ ಕೊಟ್ಟಿರುವ ಪರವಾನಗಿಗಳೆಷ್ಟು ; ಹಾಗೂ ಇದರಿಂದ ಬರುತ್ತಿರುವ ವಾರ್ಷಿಕ ಆದಾಯವೆಷ್ಟು ;

(ಅ) ಪರವಾನಗಿ ಕೊಟ್ಟಿರುವ ಒಪ್ಪಂದದ ಆಧಾರದ ಮೇಲಿನ ಬಸ್ಸುಗಳ ಓಡಾಟದಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೂಲಕ ಓಡಿಸುತ್ತಿರುವ ಬಸ್‌ಗಳಿಗೆ ತೊಂದರೆಯಾಗಿ ಆದಾಯ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಇ) ಹಾಗಿದ್ದರೆ ಈ ಬಗ್ಗೆ ಪುನರಾಲೋಚನೆ ಮಾಡಲು ಸರಕಾರ ಪ್ರಯತ್ನಿಸುವುದೇ ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

(ಅ) ೧೩೧ ವಾಹನಗಳನ್ನು ಒಳಗೊಂಡಿರುವ ೨೫ ಪರವಾನಗಿಗಳನ್ನು ನೀಡಲಾಗಿದೆ. ೫೮,೦೫,೨೧೬–೦೦ ರೂಪಾಯಿಗಳು.

(ಆ) ೧೩೧ ವಾಹನಗಳಲ್ಲಿ ೧೧೭ ವಾಹನಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿರುವುದರಿಂದ, ಸರ್ಕಾರದ ಬೊಕ್ಕಸಕ್ಕೆ ಆದಾಯ ಕಡಿಮೆಯಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. ಉಳಿದ ವಾಹನಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಉದ್ಯಮಗಳಿಗೆ ಸೇರಿದವು

(ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಭೈರಪ್ಪಾಜಿ. —ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ರಾಜ್ಯ ಮತ್ತು ಕೇಂದ್ರಕ್ಕೆ ಎರಡೂ ಸೇರಿದ ಕೆಲವು ವಾಹನಗಳಿಗೆ ಪರವಾನಗಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ರಾಜ್ಯ ಹಾಗೂ ಕೇಂದ್ರ ಯಾವ ಇಲಾಖೆಗಳಿಗೆ ಸೇರಿದಂತಹ ವಾಹನಗಳಿಗೆ ಪರವಾನಗಿಯನ್ನು ಕೊಟ್ಟಿದ್ದೀರಿ ?

ಶ್ರೀ ಎಂ. ಪಿ. ಪ್ರಕಾಶ್.—೧೨ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮಕ್ಕೆ ಸೇರಿದವು, ೨ ಅಖಿಲ ಭಾರತ ಪ್ರವಾಸೋದ್ಯಮ ನಿಗಮಕ್ಕೆ ಸೇರಿದವು, ೧೦೦ ವಾಹನಗಳು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ನಿಗಮಕ್ಕೆ ಸೇರಿವೆ. ೧೭ ವಾಹನಗಳು ಅಂತರರಾಜ್ಯ ರಸ್ತೆ ನಿಗಮಕ್ಕೆ ಸೇರಿದಂತೆ ಪರವಾನಗಿಯನ್ನು ತೆಗೆದುಕೊಂಡು ಓಡಿಸುತ್ತಿದ್ದಾರೆ.

ಶ್ರೀ ಬಿ. ಭೈರಪ್ಪಾಜಿ.—ಖಾಸಗಿಯವರು ವಾಹನಗಳನ್ನು ಓಡಿಸುವುದಕ್ಕೆ ಕೊಡುತ್ತಿದ್ದ ಪರವಾನಗಿ ಪದ್ಧತಿಯನ್ನು ಯಾವಾಗ ತಪ್ಪಿಸಿದ್ದೀರಿ ?.

ಶ್ರೀ ಎಂ. ಪಿ ಪ್ರಕಾಶ್.—ದಿನಾಂಕ ೩೦–೧–೧೯೭೬ರಲ್ಲಿ ಬಂದಂತಹ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಅಧಿನಿಯಮದ ಪ್ರಕಾರ, ಖಾಸಗಿಯವರಿಗೆ ವಾಹನಗಳನ್ನು ಓಡಿಸುವುದಕ್ಕೆ ಪರವಾನಗಿ ಕೊಡ ತಕ್ಕಂತಹ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಾಪೂಗೌಡ.—ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದ್ದರು. ಆದರೆ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಖಾಸಗಿಯವರು ಯಾವ ಭಯವೂ ಇಲ್ಲದೆ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವ ವಿಚಾರ ಏನಾಯಿತು ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಕೇಳುತ್ತಿದ್ದಾರೆ. ಈಗಾಗಲೇ ನೋಟೀಫಿಕೇಶನ್ ಹೊರಡಿಸಿ, ತೆಗೆದುಕೊಂಡಿರತಕ್ಕ ವಾಹನಗಳ ಬಗ್ಗೆ ಇರತಕ್ಕ ವ್ಯವಹಾರ ಹಾಗೆಯೇ ಉಳಿದಿದೆ.

ಶ್ರೀ ಬಿ. ಭೈರಪ್ಪಾಜಿ.— ಈಗಾಗಲೇ ರಾಷ್ಟ್ರೀಕರಣವಾಗಿದ್ದರೂ ಅನೇಕ ರಸ್ತೆಗಳಲ್ಲಿ ಬಸ್ಸುಗಳ ಸಂಚಾರವಿಲ್ಲದೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ? ಜನರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ಕಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.—ತಾವು ಸ್ಟೇಟ್ ಕ್ಯಾರಿಯೇಜ್ ಬಗ್ಗೆ ಪ್ರಶ್ನೆ ಕೇಳಿದ್ದರೆ ಸರಿಯಾಗುತ್ತಿತ್ತು. ಈಗ ಕಂಟ್ರಾಕ್ಟ್ ಕ್ಯಾರಿಯೇಜ್ ಬಗ್ಗೆ ಪ್ರಶ್ನೆ ಕೇಳಿದ್ದೀರಿ, ಖಾಸಗೀ ಮಾಲೀಕರು ವಾಹನಗಳಿಗೆ ಆಲ್ ಇಂಡಿಯಾ ಪರ್ಮಿಟ್ ತೆಗೆದುಕೊಂಡು ದುರುಪಯೋಗ ಮಾಡುತ್ತಿದ್ದಾರೆ. ಅದರ ಪ್ರಶ್ನೆ ಬಂದಾಗ ಸಮಂಗ್ರವಾದ ಉತ್ತರ ಕೊಡುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.— ರಾಜ್ಯ ಸಾರಿಗೆ ಸಂಸ್ಥೆ ವಾಹನಗಳು ಓಡಾಡುವ ಕಡೆ ಖಾಸಗಿಯವರ ವಾಹನಗಳು ಪರವಾನಗಿ ಇಲ್ಲದೇ ಓಡಾಡುತ್ತಿವೆ. ಇದು ಸರ್ಕಾರದ ಗಮನಕ್ಕೆ